
# ಪಾಠಯೋಜನೆ






## ವಿಷಯ: ಪ್ರಥಮ ಭಾಷೆ ಸಿರಿ ಕನ್ನಡ












# ಹತ್ತನೆಯ ತರಗತಿ




ಬಸವರಾಜ.ಟಿ.ಎಂ
ಕನ್ನಡ ಭಾಷಾ ಶಿಕ್ಷಕರು
ಸರ್ಕಾರಿ ಪ್ರೌಢಶಾಲೆ,ರೂಪನಗುಡಿ
ಬಳ್ಳಾರಿ ಪೂರ್ವವಲಯ ಬಳ್ಳಾರಿ ಜಿಲ್ಲೆ






ಕನ್ನಡವೆನೆ ಮನ ಮಿಡಿಯುವುದು

| ವಿಷಯ : ಪ್ರಥಮ ಭಾಷೆ ಕನ್ನಡ | | ಪಾಠ ಯೋಜನೆ | | | ತರಗತಿ : 10 |
|---|---|---|---|---|---|
| ಪಾಠದ ಶೀರ್ಷಿಕೆ : ಗದ್ಯ–01.ಯುದ್ಧ (ಸಾರಾ ಅಬೂಬಕ್ಕರ್) | | | | | |
| **ಬೋಧನೆಯ ಉದ್ದೇಶಗಳು**:1) ಸಾಹಿತ್ಯದ ಸಣ್ಣ ಕತೆ ಪ್ರಕಾರವನ್ನು ಪರಿಚಯಿಸುವುದು.<br>2) ಯುದ್ಧದಿಂದಾಗುವ ನಷ್ಟಗಳ ಬಗ್ಗೆ ತಿಳಿಸಿ ಯುದ್ಧದ ತಿರಸ್ಕಾರ ಭಾವನೆ ಮೂಡಿಸುವುದು<br>3) ಪರಸ್ಪರ ಸಹಕಾರ,ಮಾನವೀಯ ಮೌಲ್ಯಗಳನ್ನು ಬೆಳೆಸುವುದು. | | | | | |
| **ಕಲಿಕಾ ಸಾಮಗ್ರಿಗಳು** : ಸಾರಾ ಅಬೂಬಕ್ಕರ್ ರವರ ಭಾವಚಿತ್ರ , ಕವಿ ಪರಿಚಯದ ವೀಡಿಯೋ, ಯುದ್ಧ ಸನ್ನಿವೇಶದ ವೀಡಿಯೋಗಳು,ರಾಹಿಲ್ ಮುದುಕಿಯ ಸಂಭಾಷಣೆಯ ಚಿತ್ರಗಳು. | | | | | |
| **ಅವಧಿ** | **ಕಲಿಕಾ ಸಾಮರ್ಥ್ಯಗಳು/ಉಪಘಟಕಗಳು** | **ಕಲಿಕಾ/ಬೋಧನಾ ಚಟುವಟಿಕೆಗಳು** | **ಮೌಲ್ಯಮಾಪನ** | | |
| | | | **ತಂತ್ರಗಳು** | **ಸಾಧನಗಳು** | **ಪ್ರಶ್ನಾಕೋಶ (ಇ–5)** |
| | 1.ಕವಿ ಪರಿಚಯ<br><br>2.ಯುದ್ಧ ವಿಮಾನ ಸ್ಫೋಟ<br><br>3.ರಾಹಿಲನ ದಡ ಸೇರುವ ಸಾಹಸ<br><br>4.ಹೆಂಗಸಿನ ಸಾಂತ್ವಾನದ | **ಪ್ರೇರಣಾ ಚಟುವಟಿಕೆ**<br>ಪ್ರಪಂಚದಲ್ಲಿ ನಡೆದ ಯುದ್ಧಗಳ ಪಟ್ಟಿ ಮಾಡಿಸುವುದು(ಇ–1)(ಇ–2)(ಇ–3) ಮತ್ತು ಯುದ್ಧ ಸನ್ನಿವೇಶದ ವೀಡಿಯೋಗಳನ್ನು ತೋರಿಸಿ ಯುದ್ಧಗಳಿಂದಾಗುವ ಅನಾಹುತಗಳ ಬಗ್ಗೆ ವಿವರಿಸುತ್ತ ಪಟ್ಟಿ ಮಾಡಿಸುವುದು.(ಇ–2) ಅಶೋಕ ಮತ್ತು ಕಳಿಂಗ ಯುದ್ಧ ,ಪ್ರಪಂಚದ ಮಹಾಯುದ್ಧಗಳಿಂದಾದ ಅನಾಹುತ ಮತ್ತು ಪರಿಣಾಮಗಳನ್ನು ಪ್ರಶ್ನೋತ್ತರ ವಿಧಾನದ ಮೂಲಕ ಅರ್ಥೈಸುವುದು.<br><br>**ಪಾಠ ಪ್ರಕ್ರಿಯೆಗಳು**<br>ಸಾರಾ ಅಬೂಬಕ್ಕರ್ ರವರ ಪರಿಚಯದ ವೀಡಿಯೋ ತೋರಿಸುತ್ತ ಅವರ ಸ್ಥಳ,ಕಾಲ,ಕೃತಿಗಳು,ಅವರಿಗೆ ದೊರೆತ ಪ್ರಶಸ್ತಿ ಇತ್ಯಾದಿ ಅವರ ಪರಿಚಯವನ್ನು ಭಾವಚಿತ್ತರ ತೋರಿಸುತ್ತ ಕಪ್ಪು ಹಲಗೆ ಮೇಲೆ ಬರೆಸುವುದು(ಇ–1) ಮತ್ತು ವಿದ್ಯಾರ್ಥಿಯೋಬ್ಬಳಿಂದ ತಾನೇ ಸಾರಾ ಅಬೂಬಕ್ಕರಾಗಿ ತನ್ನ ಪರಿಚಯವನ್ನು ಸಂದರ್ಶನ ವಿಧಾನದ ಮೂಲಕ ಪರಿಚಯ ಮಾಡಿಕೊಳ್ಳುವ | ವೀಕ್ಷಣೆ<br><br>ಪ್ರಶ್ನೋತ್ತರ<br><br>ವೀಕ್ಷಣೆ<br><br>ಸಂದರ್ಶನ | ವೀಡಿಯೋ<br><br>ಪ್ರಶ್ನಾಕೋಶ<br><br>ವೀಡಿಯೋ<br><br>ಕವಿ ವಿದ್ಯಾರ್ಥಿ | (1)ಕಳಿಂಗ ಯುದ್ಧದಿಂದ ಯಾವ ರಾಜನ ಮನಸ್ಸು ಪರಿವರ್ತನೆ ಗೊಳಗಾಯಿತು ?<br><br>2)ಯುದ್ಧಗಳಿಂದಾಗುವ ಅನಾಹುತ ಳೇನು ?<br><br>3)ಸಾರಾ ಅಬೂಬಕ್ಕರವರ ಸ್ಥಳ ಯಾವುದು ?<br><br>4) ಅಬೂಬಕ್ಕರ್ ರವರು ಬರೆದ ಕೃತಿಗಳನ್ನು ಹೆಸರಿಸಿ.<br><br>5) ರಾಹುಲನು ಯಾರು ?<br><br>6) ರಾಹುಲನ ಕೈಯಲ್ಲಿ ಯಾವ ಪೆಟ್ಟಿಗೆಯನ್ನು ಕೈಯಲ್ಲಿ ಹಿಡಿದು ಕೊಂಡು ಕೆಳಗೆ ಬಿದ್ದನು ? |

| | | | | | |
|---|---|---|---|---|---|
| | ಮಾತುಗಳು | ಚಟುವಟಿಕೆ ಮಾಡಿಸುವುದು(ಇ–1)(ಇ–3)(ಇ–4) | | | 7) ಬ್ಲಾಕ್ ಔಟ್ ನಿಯಮ ಎಂದರೇನು? |
| | 5.ಮುದುಕಿಯ ಆತಂಕ | ಪಾಠವನ್ನು ಪಾತ್ರಗಳಿಗನುಗುಣವಾಗಿ ಗಟ್ಟಿಯಾಗಿ ಅಭಿನಯ ರೂಪದಲ್ಲಿ ಓದುವುದು. ವಿದ್ಯಾರ್ಥಿಗಳಿಗೆ ಪಾತ್ರ ಹಂಚಿ ಓದಿಸುವುದು. (ಇ–1) (ಹಿನ್ನಲೆಯನ್ನು ಕಥಾರೂಪದಲ್ಲಿ ವಿವರಿಸುವುದು. ಮೌನ ಓದು ನೀಡುವುದು. | ಅವಲೋಕನ | ತಪಶೀಲುಪಟ್ಟಿ | 8) ಮುದುಕಿ ಬಾಗಿಲನ್ನು ತೆರೆಯುವಾಗ ಏನೆಂದು ಗೊಣಗಿದಳು ? |
| | 6.ಹೆಂಗಸಿನ ಹೆರಿಗೆ ಸನ್ನಿವೇಶ | ಚಿಕ್ಕಚಿಕ್ಕ ಪ್ರಶ್ನೆಗಳನ್ನು ಕೇಳುತ್ತಾ ಪಾಠವನ್ನು ವಿದ್ಯಾರ್ಥಿಗಳಿಗೆ ಅರ್ಥೈಸುವುದು.<br>ರಾಹುಲ್ ಮತ್ತು ಮುದುಕಿಯ ಸಂಭಾಷಣೆಯ ಚಿತ್ರವನ್ನು ತೋರಿಸುತ್ತ ಪಾತ್ರಗಳಲ್ಲಿ ಅಭಿನಯಿಸುವಂತೆ ಮಾಡುವುದು. (ಇ–1) | ವೀಕ್ಷಣೆ | ದರ್ಜಾಮಾಪನಿ | 9) ಮುದುಕಿ ಯಾರಪ್ಪ ನೀನು ,ನಮ್ಮ ಕಡೆಯವನಾ ಎಂದಾಗ ರಾಹುನ ಪ್ರತಿಕ್ಕಿಯೇ ಏನಾಗಿತ್ತು ?<br>10) ರಾಹಿಲನು ಯಾರನ್ನು ಪರೀಕ್ಷೆ ಮಾಡಿದನು ? |
| | 7.ಮುದುಕಿಯ ಮಾನವೀಯತೆ | ಪಾಠವನ್ನು ನಾಟಕ ರೂಪಕ್ಕೆ ಪರಿವರ್ತಿಸಿ ಅಭಿನಯಿಸಲು ಪ್ರೇರೇಪಿಸುವುದು.(ಚಟುವಟಿಕೆ) (ಇ–1) (ಇ–2)(ಇ–3)ಸಕಲ ಪ್ರಾಣಿಗೆಳೆಲ್ಲರಲಿ ದಯಾ ತೋರಬೇಕು ಎಂಬ ಬಸವಣ್ಣನವರ ವಚನದ ಮೂಲಕ ಮಾನವೀಯ ಗುಣ ಗಳನ್ನು ತಮ್ಮ ಜೀವನದಲ್ಲೂ ಅಳವಡಿಸಿ ಕೊಳ್ಳಬೇಕೆಂದು ಅನ್ವಯ ಮಾಡಿಕೊಳ್ಳುವಂತೆ ಅರಿವು ಮೂಡಿಸುವುದು. (ಇ–4)<br>ಅಭ್ಯಾಸದಲ್ಲಿನ ಪ್ರಶ್ನೋತ್ತರಗಳನ್ನು ಚರ್ಚಿಸುವುದು. | ಅಭಿನಯ | ನಾಟಕ ರೂಪದ ಸಾಹಿತ್ಯ | 11) ಯುದ್ಧದ ಬಗ್ಗೆ ಮುದುಕಿಯ ಅಭಿಪ್ರಾಯವೇನು ?<br>12) ಯುದ್ಧ ಪಾಠದಿಂದ ನೀವು ತಿಳಿದುಕೊಂಡ ಮೌಲ್ಯ ಯಾವುದು ? |
| | 8.ಸೈದ್ಧಾಂತಿಕ ಭಾಷಾಭ್ಯಾಸ<br>ವರ್ಣಮಾಲೆಗಳು | ವರ್ಣಮಾಲೆಯ ವೀಡಿಯೋವನ್ನು ತೋರಿಸುತ್ತ ವಿದ್ಯಾರ್ಥಿಗಳಿಂದ ವರ್ಣಮಾಲೆಗಳನ್ನು ಪಟ್ಟಿಮಾಡಿ ಸುವುದು, (ಇ–1) (ಇ–3) ಉಚ್ಚಾರಣ ವಿಧಾನವನ್ನು ಹೇಳುವುದು. | ಚರ್ಚೆ | ಪ್ರಶ್ನಾಕೋಶ | |
| | ಗುಣಿತಾಕ್ಷರಗಳು | ಗುಣಿತಾಕ್ಷರಗಳ ವಿವರಣೆ, ಉಚ್ಚಾರಣಾ ವಿಧಾನ ತಿಳಿಸುವುದು ಮತ್ತು ವಿದ್ಯಾರ್ಥಿಗಳಿಂದ ಹೇಳಿಸುವುದು. | ವೀಕ್ಷಣೆ | ವೀಡಿಯೋ | 13) ಕನ್ನಡ ವರ್ಣಗಳು ಎಷ್ಟಿವೆ ?<br>14)ಅನುನಾಸಿಕಗಳಾವಾವು |

| | | | | | |
|---|---|---|---|---|---|
| | 9.ಪ್ರಬಂಧ ರಚನೆ<br><br>10.ಭಾಷಾ ಚಟುವಟಿಕೆ | ಪ್ರಬಂಧ ರಚನಾ ವಿಧಾನಗಳನ್ನು ತಿಳಿಸುವುದು. ಪ್ರಮುಖ ಪ್ರಬಂಧಗಳನ್ನು ವಿದ್ಯಾರ್ಥಿಗಳಿಂದ ಭಾಷಣ ಮಾಡಿಸುವುದು. (ಇ–1) (ಇ–3)<br><br>ತರಗತಿಯಲ್ಲಿ ವಿದ್ಯಾರ್ಥಿಗಳಿಂದ ಭಾಷಾ ಚಟುವಟಿಕೆಗಳನ್ನು ಮಾಡಿಸುವುದು. (ಇ–1) (ಇ–3) | ಭಾಷಣ | ಪ್ರಬಂಧ ಪುಸ್ತಕಗಳು | 15) ಸಜಾತಿಯ ದ್ವಿತ್ವಕ್ಷಾರಗೆಂದರೇನು?<br><br>16) ಪ್ರಬಂಧ ರಚನಾ ಹಂತಗಳಾವಾವು? |

**ಪ್ರಾರಂಭ ದಿನಾಂಕ :** **ಮುಕ್ತಾಯ ದಿನಾಂಕ :**

ಶಿಕ್ಷಕರ ಸಹಿ : ಮುಖ್ಯ ಶಿಕ್ಷಕರ ಸಹಿ :

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|

**ಪಾಠದ ಶೀರ್ಷಿಕೆ :ಪದ್ಯ–01.ಸಂಕಲ್ಪ ಗೀತೆ (ಜಿ.ಎಸ್.ಶಿವರುದ್ರಪ್ಪ )**

**ಬೋಧನೆಯ ಉದ್ದೇಶಗಳು :** 1.ಜೀವನದಲ್ಲಿ ಧನಾತ್ಮಕ ಭಾವನೆಯನ್ನು,ದೃಢಸಂಕಲ್ಪ ಹೊಂದಿರಬೇಕೆಂಬುದನ್ನು ತಿಳಿಸುವುದು.
2.ಸಾಧಕರಿಗೆ ಆತ್ಮವಿಶ್ವಾಸ,ಸಂಕಲ್ಪನಿಷ್ಠೆ,ಕ್ರೀಯಾಶೀಲತೆ ಎಷ್ಟು ಮುಖ್ಯವೆಂಬುದನ್ನು ಅರಿಯುವುದು.
3.ಸ್ವಾಸ್ಥನೆಲೆಯ ಸಮಾಜ ನಿರ್ಮಾಣಕ್ಕೆ ಪ್ರೀತಿಯ ಹಣತೆ ಹಚ್ಚಬೇಕೆಂಬ ಸಂಕಲ್ಪ ಮಾಡಿಸುವುದು.

**ಕಲಿಕಾ ಸಾಮಗ್ರಿಗಳು :** ರಾಷ್ಟ್ರಕವಿಗಳ ಭಾವಚಿತ್ರಗಳು ಕವಿ, ಕಾವ್ಯ ಪರಿಚಯದ ಚಾರ್ಟು, ಸಂಕಲ್ಪ ಗೀತೆ ಆಡಿಯೋ ಮತ್ತು ವೀಡಿಯೋ,ಪ್ರಶ್ನಾಕೋಶ, ಪದಗಳ ಅರ್ಥಗಳ ಚಾರ್ಟು,ವಿಭಕ್ತಿಪ್ರತ್ಯಯಗಳ ಚಾರ್ಟು, ಕ್ರಿಯಾಪದಗಳ ವೀಡಿಯೋ , ಜಿ.ಎಸ್. ಶಿವರುದ್ರಪ್ಪನವರ ಕೃತಿಗಳು

| ಅವಧಿ | ಕಲಿಕಾ ಸಾಮರ್ಥ್ಯಗಳು/ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ(ಇ–5) |
| | 1.ಕವಿ ಶಿವರುದ್ರಪ್ಪನವರ ಪರಿಚಯ<br><br>2.ಪ್ರೀತಿಯ ಹಣತೆ ಹಚ್ಚಿ ಜೀವನ ಮುನ್ನಡೆಸುವುದು<br><br>3.ಮುಂಗಾರಿನ ಮಳೆ ಮತು ವಸಂತ | **ಪ್ರೇರಣಾ ಚಟುವಟಿಕೆ:**<br>ವಿದ್ಯಾರ್ಥಿಗಳಿಗೆ ಕನ್ನಡದ ರಾಷ್ಟ್ರ ಕವಿಗಳ ಭಾವಚಿತ್ರಗಳನ್ನು ತೋರಿಸುವುದು. ಆ ಮೂಲಕ ಜಿ.ಎಸ್.ಶಿವರುದ್ರಪ್ಪನವರನ್ನು ಪರಿಚಯಿಸುವುದು, ಅವರ ಕೆಲವು ಕೃತಿಗಳಗನ್ನು ತೋರಿಸುತ್ತಾ ಎದೆತುಂಬಿ ಹಾಡಿದನು ಕವನ ಸಂಕಲನದಲ್ಲಿನ ಭಾವಗೀತೆಗಳ ಶೀರ್ಷಿಕೆಗಳನ್ನು ಬರೆಸುವುದು ಅದರಲ್ಲಿನ ಸಂಕಲ್ಪಗೀತೆ ಪದ್ಯವನ್ನು ಗುರುತಿಸುವುದು(ಇ–1)<br><br>**ಪಾಠ ಪ್ರಕ್ರಿಯೆಗಳು**<br>ಸಂಕಲ್ಪಗೀತೆ ಪದ್ಯವನ್ನು ಆಡಿಯೋ ಮೂಲಕ ಕೇಳಿಸುವುದು.ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಹಾಡಿಸುವುದು ಸಂಕಲ್ಪ ಗೀತೆಯ ವೀಡಿಯೋವನ್ನು | ಕವಿ ಚಿತ್ರಗುರುತಿಸುವುದು<br><br>ಕವಿಪರಿಚಯ<br><br>ಆಕಾರ ಗ್ರಂಥ ಗುರುತಿಸಿವುದು<br><br>ಗೀತೆ ಕೇಳಿಸುವುದು | ಕವಿಗಳ ಚಿತ್ರಗಳು<br><br>ಕವಿಕಾವ್ಯ ಪರಿಚಯ ಚಾರ್ಟು<br><br>ಆಕಾರ ಗ್ರಂಥ<br><br>ಆಡಿಯೋ | 1.ಕನ್ನಡದ ರಾಷ್ಟ್ರಕವಿಗಳನ್ನು ಹೆಸರಿಸಿ<br><br>2.ಜಿ.ಎಸ್.ಶಿವರುದ್ರಪ್ಪನವರ ಯಾವ ಕೃತಿಗೆ ಕೇಂದ್ರಸಾಹಿತ್ಯ ಆಕಾಡೆಮಿ ಪ್ರಶಸ್ತಿ ದೊರೆತಿದೆ<br><br>3.ಸಂಕಲ್ಪಗೀತೆ ಪದ್ಯವನ್ನು ಜಿ.ಎಸ್. ಶಿವರುದ್ರಪ್ಪನವರ ಯಾವ ಕೃತಿಯಿಂದ ಆರಿಸಿಕೊಳ್ಳಲಾಗಿದೆ.? |

| | | | | | |
|---|---|---|---|---|---|
| | 4.ಹೊಸಭರವಸೆಗಳ ಸೇತುವೆ | ತೋರಿಸುವುದು ಆ ಮೂಲಕ ಭಾವವನ್ನು ಅರ್ಥೈಸುವುದು. | ವೀಕ್ಷಣೆ | ವೀಡಿಯೋ | 4.ಎಂತಹ ಹಣತೆ ಹಚ್ಚಬೇಕೆಂದು ಕವಿ ಹೇಳುತ್ತಾರೆ ? |
| | 5.ಹೊಸ ಬಾಳಿನ ಹೊಸ ಕನಸನು ಬಿತ್ತೋಣ | ಶಿಕ್ಷಕರ ಪದ್ಯ ವಾಚನ ಪದ್ಯಗಳನ್ನು ಕಪ್ಪುಹಲಗೆ ಮೇಲೆ ಬರೆಸುವುದು ನಂತರ ಹೊಸಪದಗಳ ಅರ್ಥಗಳನ್ನು ಬಳಸಿ ಪದ್ಯಗಳ ಸಾರಂಶವನ್ನು ವಿದ್ಯಾರ್ಥಿಗಳಿಂದ ಬರೆಸಲು ಪ್ರಯತ್ನಿಸುವುದು ಮತ್ತು ತರಗತಿಯಲ್ಲಿ ಸಾರಾಂಶವನ್ನು ವಾಚಿಸುವ ಚಟುವಟಿಕೆಯನ್ನು ಮಾಡಿಸುವುದು. (ಇ–1)(ಇ–2)(ಇ–3) ಪದ್ಯದ ಭಾವಾರ್ಥ ವನ್ನು ಪ್ರಶ್ನೋತ್ತರ ವಿಧಾನದ ಮೂಲಕ ಅರ್ಥೈಸುವುದು ಜೀವನದಲ್ಲಿ ದೃಢಸಂಕಲ್ಪ ಕೈಗೊಳ್ಳಬೇಕೆಂಬ ಆಶಯವನ್ನು ಹೊಂದುವಂತೆ ಪ್ರೇರೇಪಿಸುವುದು. (ಇ–4) | ಪದ್ಯಬರವಣಿಗೆ<br>ವಾಚನ<br>ಪ್ರಶ್ನೋತ್ತರ | ಕಪ್ಪುಹಲಗೆ<br>ಪದ್ಯದ ಸಾರಾಂಶ<br>ಪ್ರಶ್ನಾಕೋಶ | 5.ಯಾವುಗಳಿಗೆ ಮುಂಗಾರಿನ ಮಳೆಯಾಗಬೇಕು ?<br>6.ಏನನ್ನು ಕೆಡವಿ ಸೇತುವೆಯನ್ನು ಕಟ್ಟಬೇಕು<br>7.ಯಾವ ಎಚ್ಚರದಲ್ಲಿ ಬದುಕಬೇಕು ?<br>8. ನಾಳಿನ ಕನಸನ್ನು ಎಲ್ಲಿ ಬಿತ್ತಬೇಕು ? |
| | 6.ಸೈದ್ಧಾಂತಿಕ ಭಾಷಾಭ್ಯಾಸ<br>ಕ್ರಿಯಾಪದಗಳು<br>ವಿಭಕ್ತಿ ಪ್ರತ್ಯಯಗಳು | ಕ್ರಿಯಾಪದಗಳ ವೀಡಿಯೋ ಮತ್ತು ವಿಭಕ್ತಿ ಪ್ರತ್ಯಯಗಳ ಚಾರ್ಟು ಬಳಸಿ ಅರ್ಥೈಸುವುದು | ವೀಕ್ಷಣೆ<br>ವಿ.ಪ್ರ.ಗುರುತಿಸುವುದು | ವೀಡಿಯೋ<br>ವಿ.ಪ್ರ.ಚಾರ್ಟು | 9)ಕ್ರಿಯಾ ಪದದ ಮೂಲ ರೂಪವೇನು ?<br>10) ಕ್ರಿಯಾಪದಗಳಿಗೆ ಉದಾಹರಣೆ ಕೊಡಿ |
| | 7.ಭಾಷಾ ಚಟುವಟಿಕೆ | ತರಗತಿಯಲ್ಲಿ ವಿದ್ಯಾರ್ಥಿಗಳಿಂದ ಭಾಷಾ ಚಟುವಟಿಕೆಗಳನ್ನು ಮಾಡಿಸುವುದು. (ಇ–1) | ಅವಲೋಕನ | ತಪಶೀಲುಪಟ್ಟಿ | 11) ಪಂಚಮಿ ವಿಭಕ್ತಿ ಪ್ರತ್ಯಯ ತಿಳಿಸಿ. |
| | 8.ಕಂಠಪಾಠ | ನಿಗದಿತ ಪದ್ಯಭಾಗ ಕಂಠಪಾಠ ಮಾಡಿಸುವುದು ತರಗತಿಯಲ್ಲಿ | | | 12) ಸಪ್ತಮಿ ವಿಭಕ್ತಿ ಪ್ರತ್ಯಯ ಹೆಸರಿಸಿ. |

| | | | | | |
|---|---|---|---|---|---|
| | (ನಿಗದಿತ ಪದ್ಯಭಾಗ) | ವಿದ್ಯಾರ್ಥಿಗಳಿಂದ ರಾಗಬದ್ದವಾಗಿ ಹಾಡುವ ಚಟುವಟಿಕೆ ನೀಡುವುದು. (ಇ–1) (ಇ–3) | ಕಂಠಪಾಠ ಹಾಡಿಸುವುದು | ಕಂಠಪಾಠ ಪದ್ಯ ಭಾಗ | |

**ಪ್ರಾರಂಭ ದಿನಾಂಕ :** **ಮುಕ್ತಾಯ ದಿನಾಂಕ :**

ಶಿಕ್ಷಕರ ಸಹಿ : ಮುಖ್ಯ ಶಿಕ್ಷಕರ ಸಹಿ :

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|

**ಪಾಠದ ಶೀರ್ಷಿಕೆ :ಗದ್ಯ-2 ಶಬರಿ (ಗೀತ ನಾಟಕ) ಪು.ತಿ.ನ**

**ಬೋಧನೆಯ ಉದ್ದೇಶಗಳು** :1.ವಿದ್ಯಾರ್ಥಿಗಳಲ್ಲಿ ರಸಭಾವನೆಗಳ ಬೆಳವಣಿಗೆ,ಅಭಿನಯಕಲೆ,ಪಾತ್ರಗಳಿಗೆ ಜೀವಂತಿಕೆ ತುಂಬುವ ಕಲೆ ಬೆಳೆಸುವುದು.
2.ಸಾಮಾಜಿಕಪ್ರಜ್ಞೆ, ದೇಶಪ್ರೇಮ, ಸಹನಾಗುಣಗಳು,ಅತಿಥಿ ಸತ್ಕಾರ,ತಾಳ್ಮೆ,ಮಾನವೀಯ ಸದ್ಗುಣಗಳು ಮುಂತಾದ ಮೌಲ್ಯಗಳನ್ನು ಬೆಳೆಸುವುದು.

**ಕಲಿಕಾ ಸಾಮಗ್ರಿಗಳು** : ಪು.ತಿ.ನ ರವರ ಭಾವಚಿತ್ರ,ಡಾಕುಮೆಂಟರಿ ವೀಡಿಯೋ, ರಾಮಾಯಣದ ಪಾತ್ರ ಚಿತ್ರಗಳು, ಶಬರಿ ರಾಮನ ಸತ್ಕಾರದ ಕಾಲ್ಪನಿಕ ಚಿತ್ರ, ವಿ.ಸೀ.ಯವರ ಕಾದಿರುವಳು ಶಬರಿ ಹಾಡಿನ ವೀಡಿಯೋ, ಶಬರಿ ಮತ್ತು ಶ್ರೀರಾಮ ಲಕ್ಷ್ಮಣ ಮತ್ತು ಧನು ಇವರ ಬೇಟಿಯ ವೀಡಿಯೋ, ಶಬರಿ ಚಿತ್ರ ಕಥಾ ವೀಡಿಯೋ ಮುಂತಾದವು.

| ಅವಧಿ | ಕಲಿಕಾ ಸಾಮರ್ಥ್ಯಗಳು/ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ(ಇ-5) |
| | ಕವಿ ಪರಿಚಯ | **ಪ್ರೇರಣಾ ಚಟುವಟಿಕೆ**<br>ಪು.ತಿ.ನ ರವರ ಡಾಕುಮೆಂಟರಿ ವೀಡಿಯೋ ತೋರಿಸುವುದು(ಇ-1) ,ಕವಿ ಪರಿಚಯ ಮಾಡಿಸುವುದು.<br>ವಿದ್ಯಾರ್ಥಿಗಳಿಂದ ಪು.ತಿ.ನ ರವರ ಸ್ಥಳ,ಕಾಲ,ಕೃತಿಗಳು,ಪ್ರಶಸ್ತಿಗಳ ಪಟ್ಟಿ ಮಾಡಿಸುವುದು ವಿದ್ಯಾರ್ಥಿಗಳಿಂದ ಓದಿಸುವುದು(ಇ-1) (ಇ-2) (ಇ-3) | ವೀಕ್ಷಣೆ<br><br>ಕವಿ ಪರಿಚಯ ಓದು | ವೀಡಿಯೋ<br><br>ಕವಿ ಪರಿಚಯದ ಪಟ್ಟಿ | 1) ಪು.ತಿ.ನ. ರವರ ಜನ್ಮಸ್ಥಳ ಯಾವುದು ?<br><br>2) ಪು.ತಿ.ನ.ರವರ ಗೀತನಾಟಕಗಳು ಯಾವಾವು ?<br><br>3)ಪು.ತಿ.ನ. ರವರ ಯಾವ ಕೃತಿಗೆ ಪಂಪ ಪ್ರಶಸ್ತಿ ದೊರೆತಿದೆ ? |
| | ಶಬರಿ ಗೀತ ನಾಟಕದ ಪೂರ್ವ ಕಥೆ | **ಪಾಠ ಪ್ರಕ್ರಿಯೆಗಳು**<br>ರಾಮಾಯಣದಲ್ಲಿ ಬರುವ ಪಾತ್ರಗಳನ್ನು ಪಟ್ಟಿ ಮಾಡಿಸಿ, ಕಪ್ಪುಹಲಗೆ ಮೇಲೆ ಬರೆಸುವುದು. ಓದಿಸುವುದು. ರಾಮ ಲಕ್ಷ್ಮಣ, ಸೀತೆ, ಶಬರಿ ಪಾತ್ರಗಳ ಬಗ್ಗೆ ವಿದ್ಯಾರ್ಥಿಗಳಿಂದ ಹೇಳಿಸುವುದು/ಹೇಳುವುದು(ಇ-1)(ಇ-2)(ಇ-3)<br>ಶಬರಿ ಚಿತ್ರ ಕಥಾ ವೀಡಿಯೋ ತೋರಿಸುವುದು ಆ ಮೂಲಕ ಶಬರಿ ನಾಟಕದ ಕಥಾ ಹಿನ್ನಲೆಯನ್ನು ತಿಳಿಯುವುದು.<br>ಶ್ರೀರಾಮ ಲಕ್ಷ್ಮಣ ಮತ್ತು ಧನು ಇವರ ಬೇಟಿಯ ವೀಡಿಯೋ,ಅವರಿಂದ ಶಬರಿ | ಪಾತ್ರಗಳ ವಿವರಣೆ ಹೇಳಿಸುವುದು<br><br>ವೀಕ್ಷಣೆ<br><br>ವೀಕ್ಷಣೆ | ರಾಮಾಯಣ ಪಾತ್ರಗಳ ವಿವರಣಾ ಪುಸ್ತಕಗಳು<br><br>ವೀಡಿಯೋ<br><br>ವೀಡಿಯೋ | 4) ರಾಮ-ಲಕ್ಷ್ಮಣರ ತಂದೆ ತಾಯಿಗಳು ಯಾರು ?<br><br>5) ಭೂಮಿಜಾತೆ ಎಂದು ಯಾರನ್ನು ಕರೆಯಲಾಗಿತ್ತದೆ ?<br><br>6) ಶಬರಿಯ ಮತಂಗಾಶ್ರಮವನ್ನು ಸೇರಲು ಕಾರಣವೇನು ? |

| | | | | | |
|---|---|---|---|---|---|
| | ರಾಮನಿಗಾಗಿ ಕಾದಿರುವ ಶಬರಿ | ರಾಮನ ದರ್ಶನಕ್ಕಾಗಿ ಕಾದಿರುವ ವಿಚಾರ ತಿಳಿಯುವುದು. | | | 7. ರಾಮನ ದರ್ಶನಕ್ಕಾಗಿ ಕಾದಿರುವರು ಯಾರು ? |
| | ರಾಮಲಕ್ಷ್ಮಣರ ಶಬರಿಯ ಹುಡುಕಾಟ | ಪಾಠವನ್ನು(ಗೀತನಾಟಕವನ್ನು) ಪಾತ್ರಗಳಿಗನು ಗುಣವಾಗಿ ಗಟ್ಟಿಯಾಗಿ ಅಭಿನಯ ರೂಪದಲ್ಲಿ ಓದುವುದು. ವಿದ್ಯಾರ್ಥಿಗಳಿಗೆ ಪಾತ್ರ ಹಂಚಿ ಓದಿಸುವುದು.(ಇ-1)(ಇ-3) ಮೌನ ಓದು ನೀಡುವುದು.ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುತ್ತಾ ಶಬರಿ ನಾಟಕವನ್ನು ವಿದ್ಯಾರ್ಥಿಗಳಿಗೆ ಅರ್ಥೈಸುವುದು. | ಪ್ರಶ್ನೋತ್ತರ<br>ವೀಕ್ಷಣೆ | ಪ್ರಶ್ನಾಕೋಶ | 8. ಶಬರಿಯನ್ನು ಹುಡುಕುತ್ತ ರಾಮ-ಲಕ್ಷ್ಮಣರು ಎಲ್ಲಿಗೆ ಬಂದರು? |
| | ರಾಮನ ಸ್ವಾಗತಕ್ಕೆ ಶಬರಿ ಸಿದ್ದತೆಗಳು | ಶಬರಿ ರಾಮನಿಗಾಗಿ ಕಾದಿರುವ 'ಕಾದಿರುವಳು ಶಬರಿ' ವೀಡಿಯೋ ತೋರಿಸುವುದುಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳುತ್ತಾ ಶಬರಿ ನಾಟಕವನ್ನು ವಿದ್ಯಾರ್ಥಿಗಳಿಗೆ ಅರ್ಥೈಸುವುದು. | ಪ್ರಶ್ನೋತ್ತರ<br>ಅಭಿನಯ | ವೀಡಿಯೋ<br>ಪ್ರಶ್ನಾಕೋಶ | 9. ಶಬರಿ ರಾಮನದರ್ಶನಕ್ಕಾಗಿ ಹೇಗೆ ಸಿದ್ದತೆ ಮಾಡಿಕೊಂಡಿದ್ದಳು? |
| | ಶಬರಿಯ ಉಪಚಾರದ ವರ್ಣನೆ | ಶಬರಿ ನಾಟಕವನ್ನು ಅಭಿನಯಿಸುವಂತೆ ವಿದ್ಯಾರ್ಥಿಗಳಿಗೆ ಪ್ರೇರೇಪಿಸುವುದು/ ಚಟುವಟಿಕೆ ಯಾಗಿ ನೀಡುವುದು(ಇ-1) (ಇ-3) | | ಶಬರಿ ನಾಟಕ | 5. ರಾಮನಿಗೆ ಶಬರಿ ಯಾವ ರೀತಿ ಉತ್ತರಿಸಿದಳು? |
| | ಹಿಂಗಿದ ಶಬರಿಯ ಚಿಂತೆ- ಮುಕ್ತಿ | ಶಬರಿಯ ತಾಳ್ಮೆ,ರಾಮನ ಆದರ್ಶಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವುದು. (ಇ-4)<br>ಅಭ್ಯಾಸ ಪ್ರಶ್ನೋತ್ತರಗಳನ್ನು ಚರ್ಚಿಸುವುದು | ಅವಲೋಕನ | ತಪಶೀಲುಪಟ್ಟಿ | 6. ಶಬರಿ ಕೊನೆಯ ಆಸೆ ಯಾವುದಾಗಿತ್ತು?? |
| | 8.ಸೈದ್ಧಾಂತಿಕ ಭಾಷಾಭ್ಯಾಸ<br>ಸಂಧಿಗಳು , ದ್ವಿರುಕ್ತಿಗಳು, ಜೋಡುನುಡಿಗಳು | ಸಂಧಿಗಳ ವೀಡಿಯೋವನ್ನು ತೋರಿಸುತ್ತ ಸಂಧಿ ಅರ್ಥವಿವರಣೆ,ಉದಾಹರಣೆ ನೀಡುವುದು ,ವಿದ್ಯಾರ್ಥಿಗಳಿಂದ ಒಂದೊಂದು ಸಂಧಿ ವಿವರಿಸಿ ಉದಾಹರಣೆ ನೀಡುವ ಚಟುವಟಿಕೆಯನ್ನು ತರಗತಿಯಲ್ಲಿ ಮಾಡಿಸುವುದು. (ಇ-1)(ಇ-2) (ಇ-3) ದ್ವಿರುಕ್ತಿಗಳು, ಜೋಡುನುಡಿಗಳ ಬಗ್ಗೆ ವಿದ್ಯಾರ್ಥಿಗಳೇ ವಿವರಿಸಿ ಉದಾಹರಣೆ | ವಿದ್ಯಾರ್ಥಿಗಳಿಂದ ಚಟುವಟಿಕೆ<br>ಅವಲೋಕನ | ವ್ಯಾಕರಣ ಪುಸ್ತಕ<br>ತಪಶೀಲು ಪಟ್ಟಿ | |

| | | | | | |
|---|---|---|---|---|---|
| | 9. ಭಾಷಾ ಚಟುವಟಿಕೆ | ನೀಡುವ ಚಟುವಟಿಕೆಯನ್ನು ಮಾಡಿಸುವುದು. (ಇ–1)<br>ತರಗತಿಯಲ್ಲಿ ವಿದ್ಯಾರ್ಥಿಗಳಿಂದ ಭಾಷಾ ಚಟುವಟಿಕೆಗಳನ್ನು ಮಾಡಿಸುವುದು. | | | |

**ಪ್ರಾರಂಭ ದಿನಾಂಕ :** **ಮುಕ್ತಾಯ ದಿನಾಂಕ :**

ಶಿಕ್ಷಕರ ಸಹಿ : ಮುಖ್ಯ ಶಿಕ್ಷಕರ ಸಹಿ :

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|

**ಪಾಠದ ಶೀರ್ಷಿಕೆ : ಪದ್ಯ-02. ಹಕ್ಕಿ ಹಾರುತಿದೆ ನೋಡಿದಿರಾ ?**

**ಬೋಧನೆಯ ಉದ್ದೇಶಗಳು :** 1.ತಾರ್ಕಿಕ ಪ್ರಶ್ನೆ ಮತ್ತು ವಿಮರ್ಶಾತ್ಮಕ ಗುಣಗಳನ್ನು ಬೆಳೆಸುವುದು.
2.ಕಾಲದಗತಿಯನ್ನು ಹಕ್ಕಿಹಾರುವಿಕೆಗೆ ಹೇಗೆ ಸಮೀಕರಿಸಿದ್ದಾರೆಂಬುದನ್ನು ಅರ್ಥೈಸಿಕೊಳ್ಳುವುದು.
3.ಕಾಲದ ಮಹತ್ವನ್ನು ಅರಿಯುವುದು.

**ಕಲಿಕಾ ಸಾಮಗ್ರಿಗಳು :** ದ.ರಾ ಬೇಂದ್ರಯವರ ಭಾವಚಿತ್ರ, ಕವಿ ಪರಿಚಯದ ವೀಡಿಯೋ , ಕವಿಕಾವ್ಯಪರಿಚಯದ ಚಾರ್ಟು, ಭಾವಗೀತೆಯ ಧ್ವನಿಸುರಳಿ, 'ಗರಿ' ಕವನ ಸಂಕಲನ ಹಕ್ಕಿ ಹಾರುತಿದೆ ವೀಡಿಯೋ, ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರ ಚಿತ್ರಗಳು

| ಅವಧಿ | ಕಲಿಕಾ ಸಾಮರ್ಥ್ಯಗಳು/ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ (ಇ-5) |
| | 1.ಕವಿ-ಕಾವ್ಯ ಪರಿಚಯ | **ಪ್ರೇರಣಾ ಚಟುವಟಿಕೆ**<br>ಜಿ.ಎಸ್.ಶಿವರುದ್ರಪ್ಪ ನವರ 'ಎಲ್ಲೋ ಹುಡುಕಿದೆ ಇಲ್ಲದ ದೇವರ'ಭಾವ ಗೀತೆಯನ್ನು ಕೇಳಿಸುವುದು. ವಿದ್ಯಾರ್ಥಿಗಳಿಂದ ಭಾವಗೀತೆಯನ್ನು ಹಾಡಿಸಲು ಪ್ರೇರೇಪಿಸುವುದು. ಜ್ಞಾನಪೀಠ ಪ್ರಶಸ್ತಿ ವಿಜೇತರ ಭಾವಚಿತ್ರಗಳನ್ನು ತೋರಿಸುತ್ತ ಬೇಂದ್ರೆಯವರನ್ನು ಗುರುತಿಸುವುದು. (ಇ-1) (ಇ-2) (ಇ-3) | ಹಾಡಿಸುವುದು<br><br>ಚಿತ್ರ ಗುರುತಿಸುವುದು | ಭಾವಗೀತಾ ಸಾಹಿತ್ಯ<br><br>ಜ್ಞಾನ ಪೀಠ ಪ್ರಶಸ್ತಿ ವಿಜೇತ ಕನ್ನಡಿಗರ ಚಿತ್ರಗಳು | 1. ಬೇಂದ್ರೆಯವರ ಯಾವ ಕೃತಿಗೆ ಜ್ಞಾನಪೀಠ ಪ್ರಶಸ್ತಿ ದೊರೆತ್ತಿದೆ.?<br><br>2.ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರನ್ನು ಹೆಸರಿಸಿ.<br><br>3.ಬೇಂದ್ರೆಯವರ ಯಾವ ಕೃತಿಯಿಂದ ಹಕ್ಕಿ ಹಾರುತಿದೆ ನೋಡಿದಿರಾ ಪದ್ಯವನ್ನು ಆರಿಸಲಾಗಿದೆ ? |
| | 2.ಕಾಲದ ವಿಸ್ತಾರ<br>3.ಕಾಲದ ಗುರುತುಗಳು | ಬೇಂದ್ರೆಯವರ ಪರಿಚಯದ ವೀಡಿಯೋ ತೋರಿಸುವುದು ಆ ಮೂಲಕ ಅವರ ಸ್ಥಳ,ಕಾಲ,ಕೃತಿ,ಪ್ರಶಸ್ತಿಗಳ ವಿವರಗಳನ್ನು ಕಪ್ಪು ಹಲಗೆ ಮೇಲೆ ಬರೆಸುವುದು ,ವಿದ್ಯಾರ್ಥಿಗಳಿಂದ ಓದಿಸುವುದು ವಿದ್ಯಾರ್ಥಿಯೇ ಬೇಂದ್ರೆಯಾಗಿ ತನ್ನ ಪರಿಚಯ ಮಾಡಿಕೊಳ್ಳುವುದು. (ಇ-1,ಇ-2, ಇ-3) | ವೀಕ್ಷಣೆ | ವೀಡಿಯೋ | 4. ಹಕ್ಕಿ ಯಾವ ವೇಗದಲ್ಲಿ ಹಾರುತ್ತದೆ.?<br><br>5. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ.? |
| | 4.ಕಾಲದ ವಿಶಾಲತೆ, ವ್ಯಾಪ್ತಿ<br>5.ಕಾಲದ ಸಾರ್ವಭೌಮತ್ವ | **ಪಾಠ ಪ್ರಕ್ರಿಯಗಳು**<br>ಭಾವಗೀತೆಯನ್ನು ರಾಗವಾಗಿ ಹಾಡುವುದು, ಧ್ವನಿಸುರುಳಿ ಮೂಲಕ ಕೇಳಿಸುವುದು. ವಿದ್ಯಾರ್ಥಿ ಗಳಿಂದ ಸಾಮೂಹಿಕವಾಗಿ ಹಾಡಿಸುವುದು. (ಇ- | ಕೇಳಿಸುವುದು | ಧ್ವನಿಸುರುಳಿ | 6. ಹಕ್ಕಿಯ ಕಣ್ಣುಗಳು ಯಾವುವು?<br>7. ಹಕ್ಕಿಯ ಯಾರ ನೆತ್ತಿಯನ್ನು ಕುಕ್ಕಿದೆ? |

| | | | | | |
|---|---|---|---|---|---|
| | 6.ಕಾಲದ ಹಾರೈಕೆ<br>7.ಹಕ್ಕಿಯ ಕಬಂಧ ಬಾಹುಗಳ ಚಾಚುವಿಕೆ<br>8.ಹಕ್ಕಿ ಹಾಕಿದ ಹೊಂಚು<br>9.ಸೈದ್ಧಾಂತಿಕ ಭಾಷಾಭ್ಯಾಸ ಅವ್ಯಯಗಳು<br>8.ಭಾಷಾ ಚಟುವಟಿಕೆಗಳು<br>9.ಪದ್ಯ ಕಂಠಪಾಠ | 1)<br>ಹಕ್ಕಿ ಹಾರುತಿದೆ ವೀಡಿಯೋ ತೋರಿಸುವುದು,<br>ಮೌನವಾಚನ ಮಾಡುವುದು<br>ಪ್ರಶ್ನೋತ್ತರ ವಿಧಾನದ ಮೂಲಕ ಅರ್ಥೈಸುವುದು.<br>ಪದ್ಯದ ಸಾರಾಂಶವನ್ನು ಬರೆಯಲು ಪ್ರೇರೇಪಿಸುವುದು(ಇ–2) ಮತ್ತು ಚಟುವಟಿಕೆಯಾಗಿ ನೀಡಿ ತರಗತಿಯಲ್ಲಿ ವಾಚಿಸುವಂತೆ ಮಾಡುವುದು. (ಇ–3)<br>ಅಭ್ಯಾಸ ಪ್ರಶ್ನೋತ್ತರಗಳ ಚರ್ಚೆ<br>ಅವ್ಯಯಗಳ ವಿಧಗಳನ್ನು ವಿದ್ಯಾರ್ಥಿಗಳಿಗೆ ಹಂಚಿ ತರಗತಿಯಲ್ಲಿ ಉದಾಹರಣೆಯೊಂದಿಗೆ ವಿವರಿಸುವ ಚಟುವಟಿಕೆಯನ್ನು ನೀಡಿ ತರಗತಿಯಲ್ಲಿ ವಿವರಿಸುವಂತೆ ಪ್ರೇರೇಪಿಸುವುದು. (ಇ–1) (ಇ–3)<br>ತರಗತಿಯಲ್ಲಿ ವಿದ್ಯಾರ್ಥಿಗಳಿಂದ ಭಾಷಾ ಚಟುವಟಿಕೆಗಳನ್ನು ಮಾಡಿಸುವುದು. (ಇ–4)<br>ಪದ್ಯಭಾಗವನ್ನು ಕಂಠಪಾಠ ಮಾಡಿಸಿ ತರಗತಿಯಲ್ಲಿ ಹಾಡಿಸುವುದು (ಚಟುವಟಿಕೆಯಾಗಿ ನೀಡುವುದು) (ಇ–3) | ವೀಕ್ಷಣೆ<br>ಪ್ರಶ್ನೋತ್ತರ<br>ಚಟುವಟಿಕೆ<br>ಚರ್ಚೆ<br>ವಿದ್ಯಾರ್ಥಿಗಳಿಂದ ಚಟುವಟಿಕೆ<br>ಬರವಣಿಗೆ<br>ಹಾಡಿಸುವುದು | ವೀಡಿಯೋ<br>ಪ್ರಶ್ನಾಕೋಶ<br>ಸಾರಂಶ ಭಾಗ<br>ಪ್ರಶ್ನಾಕೋಶ<br>ವ್ಯಾಕರಣ ಪುಸ್ತಕ<br>ಪುಸ್ತಕಗಳು<br>ಹ,ಹಾ,ನೋ–ಪದ್ಯ | 6. ಹಕ್ಕಿ ಯಾರನ್ನು ಹರಸಿದೆ?<br>7. ಹಕ್ಕಿಯು ಯಾವುದರ ಸಂಕೇತವಾಗಿದೆ.?<br>8.ಹಕ್ಕಿಯ ಚುಂಚಗಳು ಎಲ್ಲಿಯವರೆಗೆ ಚಾಚಿವೆ ?<br>9.ಸಾಮಾನ್ಯಾರ್ಥಕಾವ್ಯಯಕ್ಕೆ ಉದಾಹರಣೆ ಕೊಡಿ<br>10.ಅನುಕರಣಾವ್ಯಯಕ್ಕೆ ಉದಾಹರಣೇ ಕೊಡಿ. |

**ಪ್ರಾರಂಭ ದಿನಾಂಕ :** **ಮುಕ್ತಾಯ ದಿನಾಂಕ :**

ಶಿಕ್ಷಕರ ಸಹಿ : ಮುಖ್ಯ ಶಿಕ್ಷಕರ ಸಹಿ :

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|

**ಪಾಠದ ಶೀರ್ಷಿಕೆ : ಗದ್ಯ–03. ಲಂಡನ್ ನಗರ (ವಿ.ಕೃ.ಗೋಕಾಕ್ )**

**ಬೋಧನೆಯ ಉದ್ದೇಶಗಳು:** 1.ದೇಶೀಯ ಮತ್ತು ಅಂತರಾಷ್ಟ್ರೀಯ ಪ್ರವಾಸ ಸಾಹಿತ್ಯ ಓದುವ, ರಚಿಸುವ, ಹವ್ಯಾಸ ಬೆಳೆಸುವುದು.
2.ಲಂಡನ್ ನಗರದ ಸ್ವಚ್ಚತೆ,ಸೌಂದರ್ಯ ಮತ್ತು ಅಲ್ಲಿಯ ಜೀವನದ ರೀತಿ ನೀತಿಗಳನ್ನು ಅರಿಯುವುದು.
3.ಲಂಡನ್ ನಗರದ ಸ್ಥಿತಿಗತಿಗಳನ್ನು ನಮ್ಮ ದೇಶದ ನಗರಗಳೊಂದಿಗೆ ಹೋಲಿಸಿ ನೋಡುವುದು.

**ಕಲಿಕಾ ಸಾಮಗ್ರಿಗಳು :** ವಿ.ಕೃ.ಗೋಕಾಕ್ ರ ಭಾವಚಿತ್ರ ,ಜ್ಞಾನಪೀಠ ಪ್ರಶಸ್ತಿ ವಿಜೇತರ ಭಾವಚಿತ್ರಗಳು,ಪ್ರವಾಸಕಥನಕಗಳ ಪುಸ್ತಕಗಳು,ಪ್ರೇಕ್ಷಣೀಯ ಸ್ಥಳಗಳ ಚಿತ್ರಪಟಗಳು,ಕವಿಕಾವ್ಯಪರಿಚಯದ ಚಾರ್ಟು,ಲಂಡನ್ ನಗರದ ವೀಡಿಯೋಗಳು.ಪಠ್ಯದಲ್ಲಿ ಹೆಸರಿಸಿರುವ ಇಂಗ್ಲೆಂಡಿನ ಪ್ರಸಿದ್ಧ ವ್ಯಕ್ತಿಗಳ ಭಾವಚಿತ್ರಗಳು.

| ಅವಧಿ | ಕಲಿಕಾ ಸಾಮರ್ಥ್ಯಗಳು/ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ (ಇ–5) |
| | 1.ಕವಿ– ಕಾವ್ಯ ಪರಿಚಯ | **<u>ಪ್ರೇರಣಾ ಚಟುವಟಿಕೆ</u>**<br>ಜ್ಞಾನಪೀಠ ಪ್ರಶಸ್ತಿ ವಿಜೇತರ ಭಾವಚಿತ್ರಗಳನ್ನು ತೋರಿಸುತ್ತ ವಿ.ಕೃ.ಗೋಕಾಕ್ ರವರನ್ನು ಗುರುತಿಸುವುದು. (ಇ–2) (ಇ–1)<br>ಸಂದರ್ಶನ ವಿಧಾನದ ಮೂಲಕ ವಿದ್ಯಾರ್ಥಿ ಕವಿ ಪರಿಚಯ ಮಾಡಿಕೊಡುವುದು. (ಇ–1) ಮತ್ತೊಬ್ಬ ವಿದ್ಯಾರ್ಥಿ ಅವರ ಸ್ಥಳ,ಕಾಲ,ಕೃತಿಗಳು,ಪ್ರಶಸ್ತಿಗಳನ್ನು ಕಪ್ಪು ಹಲಗೆ ಮೇಲೆ ಬರೆದು ಓದುವುದು. (ಇ–1) (ಇ–3) | ಕವಿಯ ಚಿತ್ರ ಗುರುತಿಸುವುದು<br><br>ಸಂದರ್ಶನ<br><br>ಬರವಣಿಗೆ | ಜ್ಞಾನ ಪೀಠ ಪ್ರಶಸ್ತಿ ವಿಜೇತ ಕನ್ನಡಿಗರ ಭಾವಚಿತ್ರಗಳು<br><br>ವಿದ್ಯಾರ್ಥಿ ಕವಿ<br><br>ಕಪ್ಪುಹಲಗೆ | 1) ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರನ್ನು ಹೆಸರಿಸಿ.<br><br>2) ವಿ.ಕೃ.ಗೋಕಾಕ್ ಎಲ್ಲಿ,ಯಾವಾಗ ಜನಿಸಿದರು ?<br><br>3) ಗೋಕಾಕರಿಗೆ ದೊರೆತ ಪ್ರಶಸ್ತಿಗಳ ಪಟ್ಟಿ ಮಾಡಿರಿ. |
| | 2.ಲಂಡನ್ ಪಟ್ಟಣ | ದೇಶಿಯ ಹಾಗೂ ವಿದೇಶಿಯ ಪ್ರೇಕ್ಷಣೀಯ ಸ್ಥಳಗಳ ಚಿತ್ರಪಟ ತೋರಿಸಿ ಅವುಗಳು ಇರುವ ಸ್ಥಳಗಳನ್ನು ಹೇಳಿಸುವುದು. ಕಪ್ಪುಹಲಗೆ ಮೇಲೆ ಬರೆಸುವುದು, ಓದಿಸುವುದು. (ಇ–1) (ಇ–2)<br>ತಾವು ಕೈಗೊಂಡಿದ್ದ ಶೈಕ್ಷಣಿಕ ಪ್ರವಾಸದ ಅನುಭವಗಳನ್ನು ವಾಕ್ಯಗಳನ್ನು ಬರೆದು ಓದುವಂತೆ ಪ್ರೇರೇಪಿಸುವುದು.(ಚಟುವಟಿಕೆ) (ಇ–4) | ವೀಕ್ಷಣೆ<br><br>ಬರವಣಿಗೆ | ಪ್ರೇಕ್ಷಣೀಯ ಸ್ಥಳಗಳ ಚಿತ್ರಪಟಗಳು<br><br>ವಿದ್ಯಾರ್ಥಿ ಅನುಭವಗಳು | 4) ತಲಕಾಡು ಯಾವ ಜಿಲ್ಲೆಯಲ್ಲಿದೆ ?<br>5) ಜಯಪುರ ಯಾವ ರಾಜ್ಯದಲ್ಲಿದೆ ?<br>6) ತಾಜ್ ಮಹಲ್ ಎಲ್ಲಿದೆ ?<br>7) ಬೆಂಗಳೂರು ನಗರ ಯಾವ ದೇಶದಲ್ಲಿದೆ<br>8) ಲಂಡನ್ ನಗರ ಯಾವ ದೇಶದಲ್ಲಿದೆ ? |
| | 3.ವೂಲವರ್ಥ, ಸಿಂಪಿಗಳು ಮತ್ತುಅಮ್ಮಣ್ಣಿಗಳು | **<u>ಪಾಠ ಪ್ರಕ್ರಿಯೆಗಳು</u>**<br>ಲಂಡನ್ ನಗರದ ವೀಡಿಯೋವನ್ನು ತೋರಿಸುವುದ ರೊಂದಿಗೆ ಅಲ್ಲಿಯ ಸೌಂದರ್ಯವನ್ನು | | | 9)ಲಂಡನ್ನಿನ ರಸ್ತೆಗಳಲ್ಲಿ ಬಸ್ಸುಗಳು |

| | | | | | |
|---|---|---|---|---|---|
| | 4.ಇಂಡಿಯಾ ಆಫೀಸ್‌ನ ವಾಚನಾಲಯ<br><br>5.ಟ್ರಾಫಲ್ಗಾರ್ ಸ್ಕ್ವೇರ್<br><br>6.ವೆಷ್ಟ್ ಮಿನ್ ಸ್ಟರ್ ಅಬೆ<br><br>7.ಪೊಯೆಟ್ಸ್ ಕಾರ್ನರ್<br><br>8.ಅರಸರ ಅರಮನೆ<br><br>9.ಸೈದ್ಧಾಂತಿಕ ಭಾಷಾಭ್ಯಾಸ<br>ಕಾಲಗಳು,ಪತ್ರಲೇಖನ | ತಿಳಿಯುವುದು.<br>ಕವಿ ಪರಿಚಯದೊಂದಿಗೆ ಪಾಠವನ್ನು ಗಟ್ಟಿಯಾಗಿ ವಾಚಿಸುವುದು. ವಿದ್ಯಾರ್ಥಿಗಳಿಂದ ಗಟ್ಟಿಓದು, ಮೌನ ಓದು ಮಾಡಿಸುವುದು. ಪ್ರಶ್ನೋತ್ತರ ವಿಧಾನದ ಮೂಲಕ ಚರ್ಚಿಸುತ್ತಾ ಸಂವಹನ ನಡೆಸುವುದು.<br>ವಾಚನಾಲಯಕ್ಕೆ ಸಂಬಂಧಿಸಿದಂತೆ ಕೆಲವು ಪತ್ರಿಕೆಗಳನ್ನು ತೋರಿಸುವುದು, ನಮ್ಮ ದೇಶದಲ್ಲಿ ಪ್ರಕಟವಾಗುವ ಪತ್ರಿಕೆಗಳ ಪಟ್ಟಿ ಮಾಡಿಸುವುದು. ಪತ್ರಿಕೆಗಳ ಮಹತ್ವವನ್ನು ಕುರಿತು ಭಾಷಣ ಮಾಡಿಸುವುದು. (ಇ–1) (ಇ–2) (ಇ–3)<br>ನಮ್ಮ ಕರ್ನಾಟಕದಲ್ಲಿನ ವಸ್ತು ಸಂಗ್ರಹಾಲಯಗಳ ವೀಡಿಯೋವನ್ನು ತೋರಿಸಿ ಮಾಹಿತಿ ಸಂಗ್ರಹಿಸುವ ಚಟುವಟಿಕೆ ಮಾಡಿಸುವುದು. (ಇ–2)<br><br>ಟ್ರಾಫಲ್ಗಾರ್ ಸ್ಕ್ವೇರ್‌ದ ವೀಡಿಯೋವನ್ನು ತೋರಿಸುತ್ತ ಅಲ್ಲಿಯ ಮಾಹಿತಿಯ ವಿಷಯಗಳನ್ನು ಬರೆಸುವುದು,ಓದಿಸುವುದು. (ಇ–2)<br>ಪಠ್ಯದಲ್ಲಿ ಹೆಸರಿಸಿರುವ ಇಂಗ್ಲೆಂಡಿನ ಪ್ರಸಿದ್ಧ ವ್ಯಕ್ತಿಗಳ ಭಾವಚಿತ್ರಗಳನ್ನು ತೋರಿಸುತ್ತ ಅವರ ಸಂಕ್ಷಿಪ್ತ ಮಾಹಿತಿಯನ್ನು ಸಂಗ್ರಹಿಸಲು ವಿಶ್ವಕೋಶದಲ್ಲಿ ಹುಡುಕುವಂತೆ ಚಟುವಟಿಕೆ ನೀಡುವುದು. (ಇ–2)<br><br>ಇಂಗ್ಲೆಂಡ್‌ನ ಅರಮನೆಯ ವೀಡಿಯೋವನ್ನು ತೋರಿಸುತ್ತ ಮಾಹಿತಿ ಸಂಗ್ರಹಿಸುವುದು.ನಮ್ಮ ದೇಶದ ಅರಮನೆಗಳ ಮಾಹಿತಿಯನ್ನು ಸಂಗ್ರಹಿಸುವುದು. (ಇ–2)<br>ಪ್ರಶ್ನೋತ್ತರಗಳ ಚರ್ಚೆ<br>ವಿದ್ಯಾರ್ಥಿಗಳಿಗೆ ಕಾಲಗಳ ವಿಧಗಳ ವಿವರಣೆ ನೀಡಿ ತರಗತಿಯಲ್ಲಿ ಉದಾಹರಣೆ ಸಹಿತ ಹೇಳುವ ಚಟುವಟಿಕೆ ನೀಡುವುದು. ಪತ್ರ ಬರೆಯುವ | ಪ್ರಶ್ನೋತ್ತರ<br><br>ಭಾಷಣ<br><br>ವೀಕ್ಷಣೆ<br><br>ವೀಕ್ಷಣೆ<br><br>ಚಿತ್ರಗಳನ್ನು ಗುರುತಿಸುವುದು<br><br>ಮಾಹಿತಿ ಸಂಗ್ರಹ<br><br>ವೀಕ್ಷಣೆ<br>ಅರಮನೆಗಳ ಚಿತ್ರ ಗುರುತಿಸುವುದು<br><br>ಚರ್ಚೆ<br>ವಿದ್ಯಾರ್ಥಿಗಳಿಂದ<br>' ಕಾಲಗಳ | ಪ್ರಶ್ನಾಕೋಶ<br><br>ಪ್ರಬಂಧ ಪುಸ್ತಕ<br><br>ವೀಡಿಯೋ<br><br>ವೀಡಿಯೋ<br><br>ಚಿತ್ರಗಳು<br><br>ವಿಶ್ವಕೋಶಗಳು<br><br>ವೀಡಿಯೋ<br>ಅರಮನೆಗಳ<br>ಚಿತ್ರಗಳು<br><br>ಪ್ರಶ್ನಾಕೋಶ<br>ವ್ಯಾಕರಣ<br>ಪುಸ್ತಕಗಳು<br><br>ಪತ್ರಗಳು | ನಿಲ್ಲುವುದನ್ನು ತಪ್ಪಿಸಲು ಮಾಡಿರುವ ವ್ಯವಸ್ಥೆಯೇನು ?<br>10) ಲೇಖಕರು ನೋಡಿದ ಸ್ಟೇಷನರಿ ಅಂಗಡಿಯ ಹೆಸರೇನು ?<br>11)ಸಿಂಪಿಗಳು ಸಾದಾ ಸೂಟ್ ಹೊಲಿಯಲು ಎಷ್ಟು ಹಣ ತೆಗೆದುಕೊಳ್ಳುತ್ತಾರೆ ?<br><br>12) ಆಂಗ್ಲರ ಸಾಮ್ರಾಜ್ಯ ವೈಭವವು ಯಾವ ಓಣಿಯಲ್ಲಿ ಕಂಡುಬರುವುದು ?<br><br>13) ನೆಲ್ಸನ್ನನ ಮೂರ್ತಿ ಎಲ್ಲಿದೆ ?<br><br>14)ಲೇಖಕರು ನೋಡಿದ ಪ್ರಾರ್ಥನಾ ಮಂದಿರದ ಹೆಸರೇನು ?<br>15) ವೆಬ್ ಮಿನಿಸ್ಟರ್ ಅಬೆ ಯಾರ ಸ್ಮಾರಕವಾಗಿದೆ ?ಪ<br>16) ಪೊಯೇಟ್ಸ ಕಾರ್ನರ್ ನಲ್ಲಿ ತಪಸ್ಸಿಗೆ ಕುಳಿತಿದ್ದವರು ಯಾರು ?<br>17) ಅರಮನೆಯಲ್ಲಿ ಯಾರ್ಯಾರ ಮೂರ್ತಿಗಳಿವೆ ?<br>18) ಸ್ಟೋನ್ ಆಫ್ ಸ್ಟೋನ್ ಎಲ್ಲಿದೆ ?<br><br>19) ಕಾಲಸೂಚಕ ಪ್ರತ್ಯಯ್ಯಗಳನ್ನು ಹೆಸರಿಸಿ. |

| | | | | | |
|---|---|---|---|---|---|
| | 10.ಭಾಷಾ ಚಟುವಟಿಕೆಗಳು (ಗಾದೆಗಳು,ಪ್ರಬಂಧಗಳು) | ಹಂತಗಳನ್ನು ತಿಳಿಸಿ ವಿದ್ಯಾರ್ಥಿಗಳಿಗೆ ಶಾಲೆಗೆ ಒಂದು ದಿನ ರಜೆಕೋರಿ ಪತ್ರ ಚಳುವಳಿ ಏರ್ಪಡಿಸುವುದು.<br>ಗಾದೆಗಳ ವಿಸ್ತರಿಸಿ ತರಗತಿಯಲ್ಲಿ ಹೇಳುವುದು, ಮತ್ತು ಪ್ರಬಂಧಗಳ ಭಾಷಣ ಏರ್ಪಡಿಸುದು. (ಇ3,4) | ವಿವರಣೆ<br>ಪತ್ರಚಳುವಳಿ<br><br>ಭಾಷಣ | ಪ್ರಬಂಧ, ಗಾದೆ ಪುಸ್ತಕಗಳು | 20) ಪತ್ರ ಬರೆಯುವ ಹಂತಗಳನ್ನು ತಿಳಿಸಿ |

**ಪ್ರಾರಂಭ ದಿನಾಂಕ :** **ಮುಕ್ತಾಯ ದಿನಾಂಕ :**

ಶಿಕ್ಷಕರ ಸಹಿ : ಮುಖ್ಯ ಶಿಕ್ಷಕರ ಸಹಿ :

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|

**ಪಾಠದ ಶೀರ್ಷಿಕೆ : ಹಲಗಲಿ ಬೇಡರು (ಜಾನಪದ ಲಾವಣಿ)**

**ಬೋಧನೆಯ ಉದ್ದೇಶಗಳು** : 1.ಜನಪದ ಸಾಹಿತ್ಯದ ಮಹತ್ವವನ್ನು ತಿಳಿಸುವುದು
2.ದೇಶಭಕ್ತಿ,ತ್ಯಾಗ,ಬಲಿದಾನ,ಪರೋಪಕಾರ ಮುಂತಾದ ಗುಣಗಳನ್ನು ಬೆಳೆಸುವುದು.
3.ಅನಕ್ಷರಸ್ಥರಲ್ಲಿದ್ದ ಅಪ್ರತಿಮಾ ದೇಶಪ್ರೇಮವನ್ನು ಪ್ರಶಂಸಿಸುವುದು.

**ಕಲಿಕಾ ಸಾಮಗ್ರಿಗಳು** : ಜನಪದ ಗೀತೆಗಳ ಪುಸ್ತಕಗಳು,ಜನಪದ ಲಾವಣಿಗಳ ಪುಸ್ತಕಗಳು , ಜನಪದ ಗೀತೆಗಳ ಆಡಿಯೋ ,ಹಲಗಲಿ ಬೇಡರು ಲಾವಣಿ ಆಡಿಯೋ ಮತ್ತು ವೀಡಿಯೋ

| ಅವಧಿ | ಕಲಿಕಾ ಸಾಮರ್ಥ್ಯಗಳು/ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ (ಇ–5) |
| | ಜನಪದ ಸಾಹಿತ್ಯ ಪರಿಚಯ | **ಪ್ರೇರಣಾ ಚಟುವಟಿಕೆ:**<br>ಜನಪದ ಗೀತೆ,ಜನಪದ ತ್ರಿಪದಿಗಳನ್ನು ಹಾಡುವುದು, ವಿದ್ಯಾರ್ಥಿಗಳಿಗೆ ಗೊತ್ತಿರುವ ಜನಪದ ಗೀತೆ,ಜನಪದ ತ್ರಿಪದಿಗಳನ್ನು ಹಾಡಿಸುವುದು ಪುಸ್ತಕದಲ್ಲಿರುವ ಜನಪದ ಗೀತೆ,ಜನಪದ ತ್ರಿಪದಿಗಳನ್ನು ಲಾವಣಿಗಳನ್ನು ಹಾಡಿಸುವುದು(ಇ–1) ಆ ಮೂಲಕ ಜನಪದ ಸಾಹಿತ್ಯದ ಪರಿಚಯ | ಹಾಡಿಸುವುದು<br><br>ಆಡಿಯೋ ಕೇಳಿಸುದು | ಜನಪದಗೀತೆಗಳ ಪುಸ್ತಕ<br><br>ಜನಪದಲಾವಣಿಗಳಪುಸ್ತಕ<br><br>ಧ್ವನಿಸುರುಳಿ | 1) ಜನಪದ ಸಾಹಿತ್ಯ ಎಂದರೇನು ?<br><br>2) ಲಾವಣಿಗಳನ್ನು ವೀರಗೀತೆಗಳೆಂದು ಏಕೆ ಕರೆಯಲಾಗುತ್ತೆ ? |
| | ಬ್ಯಾಡರ ಹುಡುಗರ ವಚನ<br><br>ಹಲಗಲಿ ತಳದ ಮ್ಯಾಗ ಸಾಹೇಬನ ಸೈನ್ಯ<br><br>ಬ್ರಿಟೀಷ್ ಸೈನ್ಯದ ಮೇಲೆ ಬೇಡರ ಬೇಟೆ<br><br>ಬೆಂಕಿಯಾದ ಕಾರಸಾಹೇಬ | **ಪಾಠ ಪ್ರಕ್ರಿಯೆಗಳು**<br>ವಿದ್ಯಾರ್ಥಿಗಳಿಂಧ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ವಿಷಯದ ಸೆಮಿನಾರ್ ಮಾಡಿಸುವುದು(ಇ–1,–3) ,ಸಂಗ್ರಾಮದಲ್ಲಿ ಭಾಗವಹಿಸಿದ ಹೋರಾಟಗಾರರ ಪಟ್ಟಿ ಮಾಡಿಸಿ ಅವರ ಮಾಹಿತಿ ಸಂಗ್ರಹಿಸುವ ಚಟುವಟಿಕೆ ನೀಡುವುದು. (ಇ–3) ಹಿನ್ನಲೆಯನ್ನು ಹೇಳುವುದು,ಅದರಲ್ಲಿ ಹಲಗಲಿ ಬೇಡರ ದಂಗೆಗೆ ಕಾರಣವನ್ನು ಕುರಿತು ವಿವರಿಸುವುದು, ಆ ವಿಷಯವನ್ನು ಒಳಗೊಂಡಿರುವ ಹಲಗಲಿ ಲಾವಣಿಯನ್ನು ಪರಿಚಯಿಸುವುದು,ಲಾವಣಿಯನ್ನು ರಾಗವಾಗಿ ಹಾಡುವುದು,ಧ್ವನಿ ಸುರುಳಿ ಕೇಳಿಸುವುದು, | ಸೆಮಿನಾರ್<br><br>ಮಾಹಿತಿ ಸಂಗ್ರಹ<br><br>ಪ್ರಶ್ನೋತ್ತರ | ಸೆಮಿನಾರ್ ವಿಷಯ ಪತ್ರ<br>ಸ್ವಾತಂತ್ರ್ಯ ಹೋರಾಟಗಾರರ ು ಪುಸ್ತಕ<br><br>ಪ್ರಶ್ನಾಕೋಶ | 3) ಹಲಗಲಿ ದಂಗೆಗೆ ಕಾರಣವೇನು ?<br><br>4) ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಯಾವಾಗ ನಡೆಯಿತು ?<br><br>5) ಹಲಹಲಿ ಲಾವಣಿಗೆ ಕಾರಣರಾದ ಹುಡುಗರು ಯಾರು ? |

| | | | | | |
|---|---|---|---|---|---|
| | | ವಿದ್ಯಾರ್ಥಿಗಳಿಂದ ಸಾಮೂಹಿಕವಾಗಿ ಹಾಡಿಸುವುದು (ಇ–1) | ಆಡಿಯೋ ಕೇಳಿಸುವುದು | ಧ್ವನಿಸುರುಳಿ | 6) ಕಾರಕೂನ ಸಾಹೇಬಗ ಯಾವ ವಿಷಯ ತಲುಪಿತು ? |
| | ಬ್ಯಾಡರ ಹುಡುಗರ ಕಸರತ್ತು | ಹಲಗಲಿ ಬೇಡರು ಲಾವಣಿ ವೀಡಿಯೋವನ್ನು ತೋರಿಸುವುದು. | ವೀಡಿಯೋ ತೋರಿಸುವುದು | ವೀಡಿಯೋ | |
| | ಹಲಗಲಿ ಲೂಟಿ | ಸಾರಾಂಶವನ್ನು ಬರೆಯಲು ಪ್ರೇರೇಪಿಸುವುದು, ಓದಿಸುವುದು(ಇ–1) (ಇ–3) | ಓದಿಸುವುದು | ಸಾರಾಂಶ | 7) ಬ್ಯಾಡರ ಹುಡುಗರಿಗೆ ಬುದ್ಧಿ ಮಾತು ಹೇಳಿದವರು ಯಾರು ? |
| | | ಆ ಮೂಲಕ ಲಾವಣಿಯನ್ನು ಪ್ರಶ್ನೋತ್ತರ ವಿಧಾನದ ಮೂಲಕ ಅರ್ಥೈಸುವುದು | ಪ್ರಶ್ನೋತ್ತರ | ಪ್ರಶ್ನಾಕೋಶ | 8) ಹಲಗಲಿ ಗುರುತು ಉಳಿಯದಂತಾದುದು ಏಕೆ ? |
| | | ಲಾವಣಿಯಲ್ಲಿ ಬಂದಿರುವ ಪಾತ್ರಗಳಿಗನುಗುಣವಾಗಿ ಸಾಹಿತ್ಯ ರಚಿಸಿಕೊಂಡು ನಾಟಕ ರೂಪದಲ್ಲಿ ಅಭಿನಯಿಸುವಂತೆ ಪ್ರೇರೇಸುವುದು, (ಇ–1)(ಇ–3) | ಅಭಿನಯ | ನಾಟಕ ರೂಪದ ಸಾಹಿತ್ಯ | |
| | ಸೈದ್ಧಾಂತಿಕ ಭಾಷಾಭ್ಯಾಸ | ಹೋರಾಟದ ಮನೋಭಾವಗಳನ್ನು ಬೆಳೆಸಿಕೊಳ್ಳುವಂತೆ ವಿದ್ಯಾರ್ಥಿಗಳಲ್ಲಿ ಪ್ರೇರೇಪಿಸುವುದು ((ಇ–4)<br>ಪ್ರಶ್ನೋತ್ತರ ಚರ್ಚೆ ಮಾಡುವುದು | ಚರ್ಚೆ | ಪ್ರಶ್ನಾಕೋಶ | |
| | ದೇಶಿಯ ಮತ್ತು ಅನ್ಯದೇಶಿಯ ಪದಗಳು<br><br>ತತ್ಸಮ–ತದ್ಧವ | ದೇಶಿಯ ಮತ್ತು ಅನ್ಯದೇಶಿಯ ಪದಗಳ ಪಟ್ಟಿ ಮಾಡಿಸುವುದು,ವಿದ್ಯಾರ್ಥಿಗಳಿಂದ ಓದಿಸುವುದು (ಇ–1) | ಓದಿಸುವುದು | ದೇಶಿಯ ಮತ್ತು ಅನ್ಯದೇಶಿಯ ಪದಗಳ ಪಟ್ಟಿ | 9) ಅನಾನಸು,ಸಾಬೂನು ಪದಗಳು ಯಾವ ಭಾಷೆಯಿಂದ ಕನ್ನಡಕ್ಕೆ ಬಂದಿವೆ ?<br>10) ಕನ್ನಡಕ್ಕೆ ಬಂದ ಹಿಂದೂಸ್ಥಾನಿ ಪದಗಳನ್ನು ಹೆಸರಿಸಿ. |
| | 9.ಭಾಷಾ ಚಟುವಟಿಕೆ | ತತ್ಸಮ–ತದ್ಧವಗಳ ಪಟ್ಟಿ ತಯಾರಿಸಿ,ವಿದ್ಯಾರ್ಥಿಗಳಿಂದ ಗುರುತಿಸುವ ಚಟುವಟಿಕೆ ನೀಡುವುದು. (ಇ–1) (ಇ–2) (ಇ–3) | ಗುರುತಿಸುವುದು | ತತ್ಸಮ–ತದ್ಧವಗಳ ಪಟ್ಟಿ | 11) ತದ್ಭವ ಪದಗಳು ಎಂದರೇನು ?<br>12) ವೈಶಾಖ,ಪಾದುಕಾ ಇವುಗಳ ತದ್ಭವ ರೂಪ ತಿಳಿಸಿ. |

| | | | | | |
|---|---|---|---|---|---|
| | 10.ಕಂಠಪಾಠ(ನಿಗದಿತ ಪದ್ಯಭಾಗ) | ಕಂಠಪಾಠ ಮಾಡಿಸಿ ಲಾವಣಿಯನ್ನು ಸಾಮೂಹಿಕವಾಗಿ ಹಾಡಿಸುವುದು.(ಚಟುವಟಿಕೆ) (ಇ–1) | ಹಾಡಿಸುವುದು | ಲಾವಣಿ | |

**ಪ್ರಾರಂಭ ದಿನಾಂಕ :** **ಮುಕ್ತಾಯ ದಿನಾಂಕ :**

ಶಿಕ್ಷಕರ ಸಹಿ : ಮುಖ್ಯ ಶಿಕ್ಷಕರ ಸಹಿ :

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|

**ಪಾಠದ ಶೀರ್ಷಿಕೆ : ಭಾಗ್ಯಶಿಲ್ಪಿಗಳು (ನಾಲ್ವಡಿ ಕೃಷ್ಣರಾಜ ಒಡೆಯರ್,ಸರ್.ಎಂ.ವಿಶ್ವೇಶ್ವರಯ್ಯ) (ಡಿ.ಎಸ್.ಜಯಪ್ಪಗೌಡ)**

**ಬೋಧನೆಯ ಉದ್ದೇಶಗಳು** : 1.ಜೀವನ ಚರಿತ್ರೆ,ಆತ್ಮಕತೆಗಳ ಅಧ್ಯಯನದ ಬಗ್ಗೆ ಆಸಕ್ತಿ ಮೂಡಿಸುವುದು.
2.ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್.ಎಂ.ವಿಶ್ವೇಶ್ವರಯ್ಯನವರ ಸಾಧನೆ ಮತ್ತು ಆದರ್ಶಗಳನ್ನು ಅರಿತುಕೊಳ್ಳುವುದು.
3.ಪರಿಶ್ರಮ,ಪ್ರತಿಭೆ,ನಿಷ್ಠೆ,ಧ್ಯೇಯ,ದೃಢಸಂಕಲ್ಪಗಳಿದ್ದರೆ ಯಶಸ್ಸು ಪಡೆಯಬಹುದೆಂಬುದನ್ನು ತಿಳಿಸುವುದು.

**ಕಲಿಕಾ ಸಾಮಗ್ರಿಗಳು** : ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್.ಎಂ.ವಿಶ್ವೇಶ್ವರಯ್ಯನವರ ಭಾವಚಿತ್ರ,ಸಾಧಕರ ಚಿತ್ರಗಳು ,ಪ್ರಶ್ನಾವಳಿ , ಸಾಧಕರ ಹೆಸರುಗಳ ಕಾರ್ಡುಗಳು ,ಜೀವನ ಚರಿತ್ರೆ,ಆತ್ಮಕತೆಗಳಪುಸ್ತಕ, ವಿಶ್ವೇಶ್ವರಯ್ಯನವರ ಸಾಧನೆ ತೋರಿಸುವ ವೀಡಿಯೋಗಳು,ಕರ್ನಾಟಕ ಭೂಪಟ

| ಅವಧಿ | ಕಲಿಕಾ ಸಾಮರ್ಥ್ಯಗಳು/ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | ತಂತ್ರಗಳು | ಸಾಧನಗಳು | ಪ್ರಶ್ನಾಕೋಶ (ಇ–5) |
| | 1.ಕವಿ–ಕಾವ್ಯ ಪರಿಚಯ<br><br>2.ನಾಲ್ವಡಿ ಕೃಷ್ಣರಾಜ ಒಡೆಯರು<br><br>3.ಮಾದರಿ ಮೈಸೂರು ಮತ್ತು ಪ್ರಜಾಪ್ರತಿನಿಧಿ ಸಭೆ,ನ್ಯಾಯ | **ಪ್ರೇರಣಾ ಚಟುವಟಿಕೆ:**<br>ಸಂದರ್ಶನ ವಿಧಾನದ ಮೂಲಕ ಕವಿ ಪರಿಚಯ ಮಾಡಿಸುವುದು. (ಇ–1)<br>ಕರ್ನಾಟಕವನ್ನು ಆಳಿದ ರಾಜಮನೆತನಗಳು, ರಾಜರ ಹೆಸರುಗಳನ್ನು ಪಟ್ಟಿ ಮಾಡಿಸುವುದು ಆ ಮೂಲಕ ನಾಲ್ವಡಿ ಕೃಷ್ಣರಾಜ ಒಡೆಯರ್ ಪರಿಚಯಿಸುವುದು(ಇ–2) (ಇ–3)<br><br>ಪ್ರತಿಯೊಬ್ಬ ವಿದ್ಯಾರ್ಥಿಗೆ ಒಬ್ಬೊಬ್ಬ ಸಾಧಕರ ಚಿತ್ರ,ಮತ್ತೊಷ್ಟು ವಿದ್ಯಾರ್ಥಿಗಳಿಗೆ ಸಾಧಕರ ಹೆಸರಿನ ಕಾರ್ಡುಗಳು, ಮತ್ತೊಷ್ಟು ವಿದ್ಯಾರ್ಥಿಗಳಿಗೆ ಸಾಧಕರ ಜೀವನಚರಿತ್ರೆಯ ಪುಸ್ತಕಗಳನ್ನು ನೀಡುವುದು. ಚಿತ್ರ ಮತ್ತು ಸಾಧಕರ ಹೆಸರು ಹೊಂದಿಸುವಂತೆ ತಿಳಿಸುವುದು, ಮತ್ತು ಅವರ ಜೀವನಚರಿತ್ರೆ ಪಡೆದಿರುವ ವಿದ್ಯಾರ್ಥಿಗಳಿಂದ ಅವರ ಪರಿಚಯ ಮಾಡುವಂತೆ ಪ್ರೇರೇಪಿಸುವುದು, ಮತ್ತು ಸರ್.ಎಂ.ವಿರವರ ಜೀವನ ಪರಿಚಯಿಸುವುದು. (ಇ–1)(ಇ–2)<br>(ಇ–3)<br>**ಪಾಠಪ್ರಕ್ರಿಯೆಗಳು**<br>ಪಾಠವನ್ನು ಗಟ್ಟಿಯಾಗಿ ಸ್ವರಭಾರದೊಂದಿಗೆ | ಸಂದರ್ಶನ<br><br>ರಾಜ ಮನೆತನ ಮತ್ತು ರಾಜರ ಪಟ್ಟಿ ತಯಾರಿ<br><br>ಸಾಧಕರನ್ನು ಗುರುತಿಸುವುದು<br><br>ಸಾಧಕರ ಪರಿಚಯ | ಪ್ರಶ್ನಾವಳಿ<br><br>ಕರ್ನಾಟಕ ಇತಿಹಾಸ ಪುಸ್ತಕಗಳು<br><br>ಸಾಧಕರ ಹೆಸರುಗಳ ಕಾರ್ಡುಗಳು<br><br>ಜೀವನ ಚರಿತ್ರೆ, ಆತ್ಮಕತೆಗಳ ಪುಸ್ತಕ | 1)ಡಿ.ಎಸ್.ಜಯಪ್ಪಗೌಡರ ಸ್ಥಳ,ಕಾಲ,ಕೃತಿಗಳನ್ನು ಹೆಸರಿಸಿ<br><br>2) ಕರ್ನಾಟಕವನ್ನು ಆಳಿದ ರಾಜ ಮನೆತನಗಳಾವಾವು ?<br><br>3) ಮೈಸೂರು ಸಂಸ್ಥಾನದ ಪ್ರಮುಖ ರಾಜರುಗಳು ಯಾರ್‍ಯಾರು ?<br><br>3) ನಾಲ್ವಡಿ ಕೃಷ್ಣರಾಜ ಒಡೆಯರ್ ಯಾವಾಗ ಪಟ್ಟಾಭಿಷಿಕ್ತರಾದರು ?<br><br>4) ಮೈಸೂರು ಸಂಸ್ಥಾನ ಮಾದರಿ ಮೈಸೂರು ಎನಿಸಿಕೊಂಡಿದ್ದು ಯಾವ ರಾಜರ ಕಾಲದಲ್ಲಿ ? |

| | | | | | |
|---|---|---|---|---|---|
| | ವಿಧೇಯಕ ಸಭೆ<br><br>4.ನಾಲ್ವಡಿ ಕೃಷ್ಣರಾಜ ಒಡೆಯರ ಕೊಡುಗೆ<br><br>5.ವಿಶ್ವೇಶ್ವರಯ್ಯನವರ ಬಗ್ಗೆ ನೆಹರುರವರ ಅಭಿಮಾನದ ನುಡಿಗಳು<br>6.ಸರ್.ಎಂ.ರವರ ಬಾಲ್ಯಜೀವನ<br>7.ಸರ್.ಎಂ.ವಿ ರವರ ಶಿಕ್ಷಣ<br>8.ಮುಂಬೈ ಮತ್ತು ಪೂನಾ ನಗರಗಳಲ್ಲಿ ಸರ್.ಎಂ.ವಿರವರ ಸೇವೆ<br>8.ಮೈಸೂರು ಸಂಸ್ಥಾನದಲ್ಲಿ ಇಂಜಿನಿಯರ್<br>9.ದಿವಾನ ಸರ್.ಎಂ.ವಿರವರು<br>10.ಸರ್.ಎಂ.ವಿರವರ ದಿವಾನರಾಗಿ ಸಾಧನೆಗಳು<br>11.ಸರ್.ಎಂ.ವಿರವರು ಹೇಳಿದ ಶಿಕ್ಷಣದ ಮಹತ್ವ<br>12.ಗೊಮ್ಮಟ ವ್ಯಕ್ತಿತ್ವದ ದಾರ್ಶನಿಕ ಸರ್.ಎಂ.ವಿ<br><br>13.ಸೈದ್ಧಾಂತಿಕ ಭಾಷಾಭ್ಯಾಸ | ಓದುವುದು, ವಿದ್ಯಾರ್ಥಿಗಳಿಂದ ಗಟ್ಟಿಯಾಗಿ ಓದಿಸುವುದು,ಮೌನವಾಚನ ನೀಡುವುದು, ನಂತರ ಪ್ರಶ್ನೋತ್ತರ ವಿಧಾನದ ಮೂಲಕ ನಾಲ್ವಡಿ ಕೃಷ್ಣರಾಜ ಒಡೆಯರ ಸಾಧನೆ ಗಳನ್ನು ಪಟ್ಟಿ ಮಾಡಿಸುವುದು,ಓದಿಸುವುದು,ವಿವರಿಸುವುದು.(ಇ–1)<br><br>ಶಾಲಾ ಮಂತ್ರಿ ಮಂಡಲ ಸಭೆ ಏರ್ಪಡಿಸಿ ಅದರ ಕಾರ್ಯ ವೈಖರಿಯ ಬಗ್ಗೆ ಅರಿವು ಮೂಡಿಸುವುದು (ವಿದ್ಯಾರ್ಥಿ ಪ್ರಜಾಪ್ರತಿನಿಧಿ ಸಭೆ ) (ಇ–1) (ಇ–4)<br>ಶಿವನ ಸಮುದ್ರ ಜಲಪಾತ ಮತ್ತು ಜಲವಿದ್ಯುತ್ ಉತ್ಪಾದನಾ ಕೇಂದ್ರದ ವೀಡಿಯೋ ತೋರಿಸುತ್ತ ವಿವರಿಸುವುದು.<br><br>ಸರ್.ಎಂ.ವಿ ರವರ ಸಾಧನೆಗಳನ್ನು ವಿವರಿಸುವ ವೀಡಿಯೋಗಳ ಮತ್ತು ಚಿತ್ರಪಟಗಳನ್ನು ತೋರಿಸುತ್ತ ಅವರ ಬಾಲ್ಯಜೀವನ ಶಿಕ್ಷಣ ಮುಂಬೈ ಮತ್ತು ಪೂನಾ ನಗರಗಳಲ್ಲಿ ಸರ್.ಎಂ.ವಿರವರ ಸೇವೆ ಕುರಿತು ವಿವರಣೆ.<br><br>ಮೈಸೂರು ಸಂಸ್ಥಾನದಲ್ಲಿ ಇಂಜಿನಿಯರ್ ಆಗಿ ಸರ್.ಎಂ.ವಿರವರ ಸೇವೆ ವಿದ್ಯಾರ್ಥಿಗಳಿಂದ ಭಾಷಣ<br><br>ಸರ್.ಎಂ.ವಿರವರ ದಿವಾನರಾಗಿ ಸಾಧನೆಗಳ ಪಟ್ಟಿ ಮಾಡಿವ ಚಟುವಟಿಕೆ ನೀಡುವುದು(ಇ–1) (ಇ–2)<br><br>ಸರ್.ಎಂ.ವಿರವರು ಹೇಳಿದ ಶಿಕ್ಷಣದ ಮಹತ್ವಗಳನ್ನು ಕುರಿತು ವಿವರಿಸುವುದು.ಅವರ | ಪ್ರಶ್ನೋತ್ತರ<br><br>ಪ್ರಜಾಪ್ರತಿನಿಧಿ ಸಭೆ<br><br>ವೀಕ್ಷಣೆ<br><br>ವೀಕ್ಷಣೆ<br><br>ಭಾಷಣ<br><br>ಬರವಣಿಗೆ<br><br>ಚಿತ್ರಪಟ ತಯಾರಿ<br><br>ಆಶುಭಾಷಣ | ಪ್ರಶ್ನಾಕೋಶ<br><br>ಶಾಲಾ ಮಂತ್ರಿ ಮಂಡಲ<br><br>ವೀಡಿಯೋ<br><br>ವೀಡಿಯೋ ಚಿತ್ರಪಟಗಳು<br><br>ಭಾಷಣ ಸಾಹಿತ್ಯ<br><br>ಎಂ.ವಿರವರ ಸಾಧನೆಗಳ ಪಟ್ಟಿ<br><br>ಚಿತ್ರಗಳು ಡ್ರಾಯಿಂಗ್ ಶೀಟ್<br><br>ಲೇಖನಚಿಹ್ನೆಗಳ ಮತ್ತು ವಾಕ್ಯ ಪ್ರಕಾರಗಳ ಚೀಟಿಗಳು ಲೇಖನಚಿಹ್ನೆಗಳ | 5) ಪ್ರಜಾ ಪ್ರತಿನಿಧಿ ಸಭೆಯನ್ನು ಶಾಸನ ಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದವರು ಯಾರು ?<br>6) ನ್ಯಾಯ ವಿಧಾಯಕ ಸಭೆಯನ್ನು ಸ್ಥಾಪಿಸಿದವರು ಯಾರು ?<br>7) ಸಾಮಾಜಿಕ ಕಾನೂನುಗಳ ಹರಿಕಾರ ಎಂದು ಕರೆಸಿಕೊಂಡವರು ಯಾರು ?<br>8) ಏಷ್ಯಾ ಖಂಡದ ಮೊದಲ ಜಲವಿದ್ಯುತ್ ಯೋಜನೆ ಯಾವುದು ?<br>9) ಭಾರತ ರತ್ನ ಪ್ರಶಸ್ತಿ ಪಡೆದ ಐದು ಸಾಧಕರನ್ನು ಹೆಸರಿಸಿ.<br>10) ಭಾರತ ರತ್ನ ಪ್ರಶಸ್ತಿ ಪಡೆದ ಮೈಸೂರಿನ ದಿವಾನರು ಯಾರು ?<br>11) ಸರ್.ಎಂ.ವಿಶ್ವೇಶ್ವರಯ್ಯನವರ ಶತಮಾನೋತ್ಸವ ಸಂಭ್ರಮ ಎಲ್ಲಿ ನಡೆಯಿತು ?<br>12) ಸರ್.ಎಂ.ವಿಶ್ವೇಶ್ವರಯ್ಯನವರ ಶತಮಾನೋತ್ಸವ ಸಂಭ್ರಮದಲ್ಲಿ ಭಾಗವಹಿಸಿದ್ದ ಪ್ರಧಾನಿ ಯಾರು?<br>13) ಸರ್.ಎಂ.ವಿಶ್ವೇಶ್ವರಯ್ಯನವರು ಸ್ವಯಂಚಾಲಿತ ಬಾಗಿಲುಗಳನ್ನು ಯಾವ ಜಲಾಶಯಗಳಿಗೆ ಅಳವಡಿಸಿದರು ?<br>14) ಸರ್.ಎಂ.ವಿಶ್ವೇಶ್ವರಯ್ಯನವರನ್ನು ದಿವಾನರನ್ನಾಗಿ ಮಾಡಿದ ಅರಸು ಯಾರು ?<br>15) ಕ.ಸಾ.ಪ ಸ್ಥಾಪಕರು ಯಾರು ?<br>16) ಸರ್.ಎಂ.ವಿಶ್ವೇಶ್ವರಯ್ಯನವರ ಕೈಗಾರಿಕಾ ಘೋಷಣೆ ಏನು ?<br>17) ಸರ್.ಎಂ.ವಿಶ್ವೇಶ್ವರಯ್ಯನವರ ಆತ್ಮಕಥೆ ಯಾವುದು ? |

| | | | | | |
|---|---|---|---|---|---|
| | ಲೇಖನ ಚಿಹ್ನೆಗಳು,<br>ವಾಕ್ಯರಚನೆ,<br>ಪತ್ರಗಳು | ಸಾಹಿತ್ಯ ಸೇವೆಯ ಚಿತ್ರಪಟ ತಯಾರಿಸುವ ಚಟುವಟಿಕೆ ನೀಡುವುದು. (ಇ–1) (ಇ–2)<br><br>ವಿದ್ಯಾರ್ಥಿಗಳಿಂದ ಲೇಖನ ಚಿಹ್ನೆಗಳ ಮತ್ತು ವಾಕ್ಯ ಪ್ರಕಾರಗಳ ಆಶು ಭಾಷಣ,ಕೆಲವು ವಿದ್ಯಾರ್ಥಿಗಳಿಂದ<br>ಲೇಖನ ಚಿಹ್ನೆ ಗುರುತಿಸುವ ಚಟುವಟಿಕೆ ಮಾಡಿಸುವುದು. ವ್ಯಾವಹಾರಿಕ ಪತ್ರಗಳನ್ನು ಬರೆಯುವ ಚಟುವಟಿಕೆ ನೀಡುವುದು. (ಇ–1,2,3) | ಅವಲೋಕನ | ಪಟ್ಟಿ | 18) ಉದ್ಧರಣಾ ಚಿಹ್ನೆ ಹೇಗಿರುತ್ತದೆ ?<br><br>19) ಸಂಯುಕ್ತ ವಾಕ್ಯ ಎಂದರೇನು ? |

**ಪ್ರಾರಂಭ ದಿನಾಂಕ :** **ಮುಕ್ತಾಯ ದಿನಾಂಕ :**

ಶಿಕ್ಷಕರ ಸಹಿ : ಮುಖ್ಯ ಶಿಕ್ಷಕರ ಸಹಿ :

| ವಿಷಯ : ಪ್ರಥಮ ಭಾಷೆ ಕನ್ನಡ | ಪಾಠ ಯೋಜನೆ | ತರಗತಿ : 10 |
|---|---|---|

**ಪಾಠದ ಶೀರ್ಷಿಕೆ : ಕೌರವೇಂದ್ರನ ಕೊಂದೆ ನೀನು (ಕುಮಾರವ್ಯಾಸ)**

**ಬೋಧನೆಯ ಉದ್ದೇಶಗಳು :** 1.ಜೀವನದಲ್ಲಿ ಪರಸ್ಪರ ಹೊಂದಾಣಿಕೆ ಮತ್ತು ಸಾಮರಸ್ಯದ ಬದುಕು ಆಪೇಕ್ಷಣೀಯವೆಂಬುದನ್ನು ತಿಳಿಸುವುದು.
2.ಮಹಾಭಾರತದ ಪಾತ್ರಗಳಲ್ಲಿನ ಉತ್ತಮ ಮೌಲ್ಯಗಳನ್ನು ಬೆಳೆಸುವುದು
3.ಕರ್ಣನ ಸ್ವಾಮಿನಿಷ್ಠೆ,ಕೃಷ್ಣನ ಧರ್ಮಕ್ಷಮತೆಯ ಮಹತ್ವವನ್ನು ಅರಿಯುವುದು

**ಕಲಿಕಾ ಸಾಮಗ್ರಿಗಳು :** ಕುಮಾರವ್ಯಾಸನ ಭಾವಚಿತ್ರ,ಆಕಾರ ಗ್ರಂಥ,ಕುಮಾರವ್ಯಾಸ ನಿಘಂಟು, ಪ್ರಶ್ನಾಕೋಶ, ಕೃಷ್ಣ–ಕರ್ಣರು ರಥವೇರಿದ ಕಾಲ್ಪನಿಕ ಚಿತ್ರ, ಕರ್ಣ ಮತ್ತು ಕೃಷ್ಣರ ಸಂಭಾಷಣೆಯ ಅನಿಮೇಶನ್ ವೀಡಿಯೋ, ಮಹಾಭಾರತ ಪಾತ್ರಪರಿಚಯ ಪುಸ್ತಕ,

| ಅವಧಿ | ಕಲಿಕಾ ಸಾಮರ್ಥ್ಯಗಳು/ಉಪಘಟಕಗಳು | ಕಲಿಕಾ/ಬೋಧನಾ ಚಟುವಟಿಕೆಗಳು | ಮೌಲ್ಯಮಾಪನ | | |
|---|---|---|---|---|---|
| | | | **ತಂತ್ರಗಳು** | **ಸಾಧನಗಳು** | **ಪ್ರಶ್ನಾಕೋಶ (ಇ–5)** |
